ನಾವು ಸುತ್ತ ಮುತ್ತಲೂ ಹುಡುಕಾಟ ನಡೆಸಿದೆವು. ಜೋರಾಗಿ ಗಾಳಿ ಬೀಸುತ್ತಿದ್ದುದರಿಂದ ಅವೆಲ್ಲ ಹಾರಿಹೋಗಿರಬಹುದು ಅಂತ ತರ್ಕಿಸಿದೆವು. ಅನಂತರ ನಾವು ಮನೆಯ ಮುಂಭಾಗಕ್ಕೆ ಬಂದೆವು. ಅಲ್ಲಿಂದ ತುಸು ದೂರದಲ್ಲಿ ಕಾರ್ಖಾನೆಯ ಕಟ್ಟಡವಿತ್ತು.

"ಮುತ್ತಪ್ಪರವರೇ, ನೋಡಿ, ಆ ಕಟ್ಟಡದಲ್ಲೊಂದು ಸಿಸಿಟಿವಿ ಕ್ಯಾಮೆರಾ ಕಾಣಿಸ್ತಾ ಇದೆ. ಅದರ ಫೂಟೇಜು ಸಿಗಬಹುದೇ?"

ನಾಗರಾಜುವಿನ ಮನೆಯತ್ತ ಮುಖ ಮಾಡಿದ್ದ ಸಿಸಿಟಿವಿ ಕ್ಯಾಮೆರಾವನ್ನು ನಾನು ಆಗಷ್ಟೇ ಗಮನಿಸಿದ್ದು. ಮುತ್ತಪ್ಪ ತಲೆಯಾಡಿಸಿದ. ಅನಂತರ ನಾವೆಲ್ಲ ಕಚೇರಿಯ ಕಟ್ಟಡದತ್ತ ಹೆಜ್ಜೆ ಹಾಕಿದೆವು.

★★★

ಕಚೇರಿಯಲ್ಲಿ ನಾವು ಪಾಲುದಾರರೊಡನೆ ಚರ್ಚೆ ಮಾಡಿದೆವು. ಇಬ್ಬರಿಗೂ ನಾಗರಾಜುವಿನ ಮೇಲೆ ಅನುಮಾನವಿರಲಿಲ್ಲ. ಸುಬ್ಬಯ್ಯನ ಮೇಲೆ ಇಬ್ಬರಿಗೂ ನಂಬಿಕೆಯಿರಲಿಲ್ಲ. ಆದರೆ, ಆತನನ್ನು ಯಾಕೆ ಕೆಲಸದಿಂದ ಏಕೆ ತೆಗೆದಿಲ್ಲ ಎನ್ನುವುದಕ್ಕೆ ಸರಿಯಾದ ಸಾಕ್ಷ್ಯ ಸಿಕ್ಕಿರಲಿಲ್ಲ ಎಂಬ ಕಾರಣ ನೀಡಿದರು. ಮುತ್ತಪ್ಪ ಮಾತ್ರ ಒಂದು ವಿಚಿತ್ರವಾದ ಸಂಗತಿಯನ್ನು ತಿಳಿಸಿದ. ನಾಗರಾಜುವಿನ ಮನೆಯಲ್ಲಿ ತನಿಖೆಗೆ ಹೋದಾಗ, ನಾಗರಾಜು ಆ ಫೈಲನ್ನು ಕಂಡು, ತುಸು ಗಾಬರಿಯಿಂದ ತೆರೆದು, 'ಅರೇ! ಅದೆಲ್ಲಿ ಹೋಯ್ತು? ಇದು ಹೇಗೆ ಬಂದಿತು?' ಎಂಬ ಉದ್ಗಾರ ತೆಗೆದಿದ್ದನಂತೆ.

"ಅದೆಲ್ಲಿ ಹೋಯ್ತು ಎಂಬ ಆತನ ಉದ್ಗಾರ ನನ್ಗೆ ವಿಚಿತ್ರವಾಗಿ ಕಂಡಿತು" ಮುತ್ತಪ್ಪ ಹೇಳಿದ.

"ಬಹಳ ಆಸಕ್ತಿದಾಯಕವಾಗಿದೆ. ನೀವು ಇವರಿಬ್ಬರ ಮನೆ ತಪಾಸಣೆ ಮಾಡುವ ನಿರ್ಧಾರ ಯಾವತ್ತು ತೆಗೆದುಕೊಂಡಿರಿ?"

"ನಿನ್ನೆ ರಾತ್ರಿ. ನಾವು ಬಿಡ್ ದಾಖಲೆಯ ಸೋರಿಕೆಯ ಬಗ್ಗೆ ಚರ್ಚೆ ನಡೆಸಿದೆವು. ನಮ್ಗೆ ಸುಬ್ಬಯ್ಯನ ಮೇಲೆ ಅನುಮಾನ. ನಿನ್ನೆಯಷ್ಟೇ ಒಂದು ಬಿಡ್ ತಯಾರು ಮಾಡಿದ್ದೆವು. ಅದಕ್ಕೆ ನಾಳೆ ಕೊನೆಯ ದಿನ. ಹಾಗಾಗಿ ಅದು ಸೋರಿಕೆಯಾಗುವುದಾದರೆ ನಿನ್ನೆಯೇ ಆಗಬೇಕು. ಹಾಗಾಗಿ ಇವತ್ತು ಬೆಳಗ್ಗೆ ಹಠಾತ್ತಾಗಿ ಪರಿಶೀಲಿಸಿದೆವು."

"ಎಷ್ಟು ಗಂಟೆಗೆ ನೀವು ತನಿಖೆ ಆರಂಭಿಸಿದ್ದು?"

"ಮೊದಲಿಗೆ, ನಾವು ಇವತ್ತು ಬೆಳಗ್ಗೆ ಬಿಡ್‌ನ್ನು ಅಪ್‌ಲೋಡ್ ಮಾಡಿ ಅನಂತರ, ಅಂದರೆ, ಹನ್ನೆರಡು ಗಂಟೆಯ ಮೇಲೆ ತನಿಖೆ ಮಾಡುವುದೆಂದು ನಿಶ್ಚಯಿಸಿದ್ದೆವು. ಆದರೆ, ಬೆಳಗ್ಗೆ ಪ್ಲಾನು ಬದಲಾಯಿಸಿದೆವು. ಬಿಡ್ ಮಾಡಿದ ಅನಂತರ ಅದನ್ನು ಬದಲಿಸಲು ಆಗುವುದಿಲ್ಲ. ಒಂದೊಮ್ಮೆ ಸೋರಿಕೆಯಾಗಿದ್ದು ಖಚಿತವಾದರೆ, ಬಿಡ್ ಬದಲಾಯಿಸಬಹುದಲ್ಲ. ನಾಳೆವರೆಗೆ ಹೇಗೂ ಸಮಯವಿದೆಯೆಂದು, ಸುಮಾರು ಒಂಬತ್ತರ ಹೊತ್ತಿಗೇ ತನಿಖೆ ಆರಂಭಿಸಿದೆವು. ಇಬ್ಬರನ್ನೂ ಕರೆಸಿ, ನಮ್ಮ ಅನುಮಾನ ಸ್ಪಷ್ಟಪಡಿಸಿದೆವು. ಮೊದಲಿಗೆ ಅವರಿಬ್ಬರ ಮೊಬೈಲು ಚೆಕ್ ಮಾಡಿದೆವು. ಏನೂ ಅನುಮಾನಸ್ಪಾದವಾದ ಸಂಪರ್ಕ ಮಾಹಿತಿ, ವಾಟ್ಸ್‌ಆ್ಯಪ್ ಚಾಟ್ ಕಾಣಿಸಲಿಲ್ಲ. ಅದು ಮುಗಿಯುವಾಗ ಹತ್ತು ಗಂಟೆಯಾಗಿತ್ತು. ಅನಂತರ ಸುಬ್ಬಯ್ಯನ ಮನೆ ಪರಿಶೀಲನೆ. ಅದು ಮುಗಿಯುವಾಗ, ಹನ್ನೊಂದು. ಆಮೇಲೆ ನಾಗರಾಜುವಿನ ಮನೆ. ಅಲ್ಲಿ ಹತ್ತೇ ನಿಮಿಷದಲ್ಲಿ ಫೈಲು ಸಿಕ್ಕಿತು."

"ಸರಿ, ನಾವೊಮ್ಮೆ ಆ ಫೂಟೇಜು ನೋಡೋಣವೇ?"

ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ನೀಲಮ್ಮ ಬರಿಗೈಯಲ್ಲಿ ನಾಗರಾಜುವಿನ ಮನೆಯತ್ತ ಹೋಗುವ ದೃಶ್ಯಾವಳಿ ನಮಗೆ ಕಾಣಿಸಿತು. ಹಾಗಿದ್ದರೆ, ಆ ಫೈಲನ್ನು ಆಕೆ ಅಲ್ಲಿರಿಸಿರುವ ಸಾಧ್ಯತೆಯಿಲ್ಲವೆನ್ನುವುದು ನಿಚ್ಚಳವಾಗಿತ್ತು.